



ಅರುಣ ಪಿ. ಭಟ್ಟ


## ವಾರಭವಿಷ್ಯ: 18.07.2024ದಿಂದ 24.07.2024ರವರೆಗೆ




ಹೊಸ ಕೆಲಸಗಳಿಗೆ ಪ್ರಯತ್ನಿಸಲು ಸೂಕ್ತ ಕಾಲ. ಉದ್ಯೋಗದಲ್ಲಿ ಅದ್ಭುತ ಯಶಸ್ಸಿನೊಂದಿಗೆ ವಾರದ ಆರಂಭ ಆಗುವ ಸಾಧ್ಯತೆ. ಹೊಸದಾಗಿ ಕೆಲಸಕ್ಕಾಗಿ ಸಂದರ್ಶನಗಳಿಗೆ ತೆರಳಿದರೆ ಸಕಾರಾತ್ಮಕ ಫಲಿತಾಂಶ ದೊರೆಯುವ ಸಾಧ್ಯತೆ ಹೆಚ್ಚಿರುತ್ತದೆ. ಮಕ್ಕಳ ಬಗ್ಗೆ ನಿಮ್ಮ ಗಮನ ಹಾಗೂ ಅವರ ಪರಿಸರವನ್ನು ನೀವು ಉತ್ತಮವಾಗಿಟ್ಟುಕೊಳ್ಳುವ ಮನಸ್ಥಿತಿಯನ್ನು ರೂಪಿಸುವುದು ಒಳ್ಳೆಯದು. ಶುಭದಿನ 19. ಗೋಪೂಜೆ ಮಾಡಿರಿ.




ನೀವು ಮಾಡುವ ಕೆಲಸದಲ್ಲಿ ಉತ್ತಮ ಫಲಿತಾಂಶ ಹಾಗೂ ಆದಾಯ ವೃದ್ಧಿಯಾಗಲಿದೆ. ಇನ್ನೊಬ್ಬರಿಗೆ ಬುದ್ಧಿವಾದ ಹೇಳುವ ಮೊದಲು ವ್ಯಕ್ತಿ ಕೇಳುಗನಾಗಿದ್ದಾನೆಯೇ ಎಂಬುದನ್ನು ಅರಿತುಕೊಳ್ಳಿ. ಆದಾಯ ಹೆಚ್ಚಳಕ್ಕೆ ಅವಕಾಶ ಇದೆ. ಉದ್ಯೋಗ ವಿಚಾರದಲ್ಲಿ ಯಶಸ್ಸು ನಿಮ್ಮ ಮನೆಯ ಬಾಗಿಲು ಬಡಿಯುತ್ತದೆ. ಹೊಸ ಉದ್ಯೋಗಕ್ಕೆ ಹೆಚ್ಚು ಶ್ರಮ ಹಾಕಬೇಕಾಗುತ್ತದೆ. ಶುಭದಿನ 21. ಹನುಮಾನ್ ಚಾಲೀಸ್ ಪಠಿಸಿರಿ.





ಈ ವಾರದ ಮೊದಲಾರ್ಧದಲ್ಲಿ ಗ್ರಹಗತಿಗಳು ನಿಮಗೆ ಅನುಕೂಲಕರವಾಗಿವೆ. ಮುಖ್ಯವಾದ ಕೆಲಸಗಳನ್ನು ಮಾಡಿಕೊಂಡು ಬಿಡಿ. ನಿಮ್ಮ ವಿನಯದ ಸ್ವಭಾವದಿಂದ ಹೆಚ್ಚಿನ ಹೆಸರು ಸಂಪಾದನೆ ಮಾಡಲಿದ್ದೀರಿ. ಸಂಗಾತಿಯ ಬಯಕೆಗಳಿಗೆ ನೀವು ಸಮ್ಮತಿಯ ವಾಗ್ದಾನ ನೀಡಲಿದ್ದೀರಿ. ಮಕ್ಕಳ ಕೆಲವು ವರ್ತನೆಗಳು ನಿಮ್ಮ ಮನದಲ್ಲಿ ಬೇಸರ ತರಿಸಲಿವೆ. ಶುಭದಿನ 23. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.





ನಿಮ್ಮ ಕಾರ್ಯದಲ್ಲಿ ಅನಗತ್ಯವಾಗಿ ತೊಂದರೆ ಬರಬಹುದು. ಆದಷ್ಟು ಸಮಸ್ಯೆಗಳಿಗೆ ಪರಿಹಾರ ಹುಡುಕಿ. ಕೆಲವು ಕಾರ್ಯಗಳನ್ನು ಸ್ವತಃ ನಿಂತು ಮಾಡುವುದು ಒಳಿತು. ಆರ್ಥಿಕ ಮೂಲಗಳಿಗೆ ತಡೆಯಾಗುವ ಸಾಧ್ಯತೆ ಇದೆ. ಕಾನೂನು ವ್ಯಾಜ್ಯಗಳು, ಕುಟುಂಬದಲ್ಲಿ ಸಮತೋಲನ ಕಾಯ್ದುಕೊಳ್ಳುತ್ತೀರಿ. ಸಾಲ ಮರುಪಾವತಿಯಲ್ಲಿ ಸಮಸ್ಯೆ ಎದುರಾಗಬಹುದು. ಶುಭದಿನ. 21. ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ವಿವೇಚನಾರಹಿತ ಹೂಡಿಕೆಗಳಿಂದ ಧನ ನಷ್ಟ ಆಗುವ ಸಂಭವ ಕಾಣಬಹುದಾಗಿದೆ. ನಿಮ್ಮದೇ ವಿಚಾರಗಳು ನಡೆಯಬೇಕೆಂಬ ವಾದವು ಅತಿಶಯೋಕ್ತಿಯಾಗಿ ಕಾಣಬಹುದು, ಎಲ್ಲರ ಮಾತಿಗೆ ಪ್ರಾಧಾನ್ಯ ನೀಡಿ ಮುನ್ನಡೆಯಿರಿ. ನಿಮ್ಮಲ್ಲಿ ಹೊಳೆಯುವ ಆಲೋಚನೆ ಉತ್ತಮ ಪರಿಕಲ್ಪನೆಯಾಗಿದ್ದು ಇದರಿಂದ ಅನುಕೂಲಗಳು ಕಾಣಸಿಗಲಿವೆ. ಶುಭದಿನ. 22. ವಿಷ್ಣು ಸಹಸ್ರನಾಮ ಓದಿರಿ.





ಕೆಲಸದಲ್ಲಿ ಆಗುವ ವಿಳಂಬದಿಂದ ನಿಮ್ಮ ಬಗ್ಗೆ ಹಲವಾರು ಮಾತುಗಳು ಕೇಳಿಬರುತ್ತವೆ. ಕೆಲ ವಿಚಾರಗಳಲ್ಲಿ ಅತಿಯಾದ ಆಸಕ್ತಿ ತೋರಿಸುವುದು ಒಳ್ಳೆಯದಲ್ಲ. ಯೋಜನೆಗಳ ವಿಸ್ತರಣೆಗೆ ಅವಕಾಶಗಳು ಸಿಗುವ ಸಾಧ್ಯತೆ ಇದೆ. ವ್ಯವಹಾರ ವಿಸ್ತರಣೆಗೆ ಆಲೋಚನೆ ಮಾಡುತ್ತೀರಿ. ಹೂಡಿಕೆಗೆ ಸಂಬಂಧಿಸಿದಂತೆ ನಿಮಗೆ ಅನುಕೂಲ ಆಗಲಿದೆ. ಪರಿಸ್ಥಿತಿ ಅನುಕೂಲಕರವಾಗಿ ಇರಲಿದೆ. ಶುಭದಿನ. 20. ನವದುರ್ಗಾ ಆರಾಧನೆ ಮಾಡಿರಿ.





ಮನಸ್ಸು ಮರ್ಕಟವಿದ್ದಂತೆ. ನಿಮ್ಮ ಮನೋಕಾಮನೆಗಳನ್ನು ಆದಷ್ಟು ನಿಯಂತ್ರಣ ಮಾಡುವುದು ಒಳ್ಳೆಯದು. ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆಗಳು ಕಂಡುಬರುತ್ತವೆ. ರಚನಾತ್ಮಕ ಕೆಲಸದಲ್ಲಿ ಆಸಕ್ತಿ ಇದ್ದರೆ ದೊಡ್ಡ ಮಟ್ಟದಲ್ಲಿ ಅದೃಷ್ಟ ನಿಮ್ಮ ಪಾಲಿಗೆ ಹುಡುಕಿಕೊಂಡು ಬರಲಿದೆ. ಸ್ಪರ್ಧಾತ್ಮಕ ಕ್ಷೇತ್ರದಲ್ಲೂ ಯಶಸ್ಸು ದೊರೆಯಲಿದೆ. ಶುಭದಿನ 22. ಆದಿತ್ಯ ಹೃದಯ ಪಠಿಸಿರಿ.





ಆರ್ಥಿಕವಾಗಿ ಬೆಳವಣಿಗೆ ಸಾಧಿಸುವಿರಿ. ರಾಜಿ ಪಂಚಾಯಿತಿಗಳಲ್ಲಿ ಹೋಗದಿರುವುದು ತುಂಬಾ ಸೂಕ್ತ. ಸುಖಾಸುಮ್ಮನೆ ಕದನಕ್ಕೆ ಬರುವವರ ಬಗ್ಗೆ ಎಚ್ಚರ. ಸಂಗಾತಿಯ ಜೊತೆಗೆ ಖರೀದಿ ಪ್ರಕ್ರಿಯೆಗಳನ್ನು ಮಾಡಲು ಇಚ್ಛಿಸುತ್ತೀರಿ. ನಿಮ್ಮ ಸಾಮರ್ಥ್ಯ ಕಂಡು ಇತರರು ಬೆರಗಾಗುತ್ತಾರೆ. ಸಾರ್ವಜನಿಕ ಮನ್ನಣೆ ದೊರೆಯುವ ಅವಕಾಶಗಳು ನಿಚ್ಚಳವಾಗಿವೆ. ಶುಭದಿನ 23. ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.





ಗ್ರಹಗತಿಗಳು ನಿಮ್ಮ ಕಡೆಗೆ ಶುಭ ದೃಷ್ಟಿ ಬೀರುತ್ತಿವೆ. ಬಾಕಿ ಇರುವ ನಿಮ್ಮ ಕೆಲಸಗಳಿಗೆ ಈ ವಾರ ಪರಿಹಾರ ಸಿಗಲಿದೆ. ಉದ್ಯೋಗ ಹಾಗೂ ವೈಯಕ್ತಿಕ ಸಂಗತಿಗಳಲ್ಲಿ ನಿಮ್ಮ ಪಾಲಿಗೆ ಯಶಸ್ಸು ದೊರೆಯಲಿದೆ. ಸಂದರ್ಶನಗಳಲ್ಲಿ ಯಶಸ್ಸನ್ನು ಸಾಧಿಸುತ್ತೀರಿ. ತುಂಬ ಮುಖ್ಯವಾದ ಚರ್ಚೆ ನಡೆಸುವ ಸಾಧ್ಯತೆ ಇದೆ. ಆಸ್ತಿ ಸಂಬಂಧಿಸಿದಂತೆ ಉದ್ವೇಗ ಇದ್ದೇ ಇರುತ್ತದೆ. ಶುಭದಿನ. 24. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ಹೊಸ ಯೋಜನೆಗೆ ಈಗಿನಿಂದಲೇ ಸಿದ್ಧತೆ ನಡೆಸುವುದು ಒಳ್ಳೆಯದು. ಕೃಷಿ ಚಟುವಟಿಕೆಗಳಲ್ಲಿ ಉತ್ತಮವಾದ ಬೆಳವಣಿಗೆ ಕಂಡುಬರುತ್ತದೆ. ಆತ್ಮೀಯರ ಸಹಕಾರ ಕೇಳುವ ಸಾಧ್ಯತೆ ಇದೆ. ವಾರದ ಶುರುವಿನಲ್ಲಿ ದೂರದ ಪ್ರದೇಶಗಳಿಗೆ ಪ್ರಯಾಣ ಮಾಡುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ನಿಮಗೆ ಅನುಕೂಲಕರವಾಗಿ ಇದೆ. ಹಲವು ಅವಕಾಶಗಳು ದೊರೆಯಲಿವೆ. ಶುಭದಿನ 22. ಕಾಲಭೈರವನ ಸೇವೆ ಮಾಡಿರಿ.




ಸೋಲಿನಿಂದ ಗೆಲುವಿನ ಕಡೆಗೆ ಪ್ರಯಾಣ ಬೆಳೆಸುವಿರಿ. ಸಂತೋಷದ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆ. ಅನಿರೀಕ್ಷಿತವಾಗಿ ಸಂಕಷ್ಟ ಎದುರಾಗಬಹುದು. ದೃಢಮನಸ್ಸಿನಿಂದ ಕಾರ್ಯಗಳಲ್ಲಿ ಸಫಲರಾಗುವಿರಿ. ಸಮಸ್ಯೆಗಳ ಸುಳಿವಿನಿಂದ ಹೊರಬರಲು ಪ್ರಯತ್ನ ಮೆಚ್ಚುವಂಥದ್ದು. ಮನೆಗೆ ನೆಂಟರಿಷ್ಟರ ಆಗಮನ ಸಾಧ್ಯತೆ. ಯೋಗ ತರಗತಿಗಳಿಗೆ ಸೇರಲು ಆಲೋಚನೆ ಮಾಡುತ್ತೀರಿ. ಶುಭದಿನ 24. ಶನಿಸ್ತೋತ್ರ ಪಠಿಸಿರಿ.




ಕೌಟುಂಬಿಕ ಸಮಸ್ಯೆಗಳು ಸರಿಹೋಗಲಿವೆ. ಉದ್ಯೋಗದ ಸ್ಥಿತಿಗತಿಗಳು ಚೇತರಿಕೆಯತ್ತ ಸಾಗುತ್ತವೆ. ನಿಮ್ಮ ಕ್ರಿಯಾಶೀಲತೆಯಿಂದ ಹೊಸತಾದ ಕಲ್ಪನೆಗಳೊಂದಿಗೆ ಸಾಗುವಿರಿ. ಉದ್ಯೋಗದಲ್ಲಿ ಪ್ರಗತಿ. ಯಶಸ್ವಿ ನಿರ್ಣಯಗಳಿಂದ ಸ್ಥಾನ ಗಟ್ಟಿಗೊಳಿಸಿಕೊಳ್ಳುವಿರಿ. ನಿಮ್ಮ ವಿರೋಧಿಗಳನ್ನು ಈ ಅವಧಿಯಲ್ಲಿ ಮಣಿಸುತ್ತೀರಿ. ಹಣಕಾಸು ಹೂಡಿಕೆ ಲಾಭದಾಯಕವಾಗಿ ಇರುತ್ತದೆ. ಶುಭದಿನ 21. ಗಣಪತಿಗೆ ದೂರ್ವಾರ್ಚನೆ ಮಾಡಿರಿ.